KATK900005432019

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತಿಪಟೂರು**

**ಎಸ್.ಸಿ.ಸಂಖ್ಯೆಃ 10039/2019**

**ಪ್ರಮಾಣೀಕರಿಸಿದ ದಿನಾಂಕಃ 21-09-2024**
**ಚಾ.ಸಾ-16**
**ಪ್ರಾ.ಸಾ-10**

| | |
|---|---|
| ಹೆಸರು | ಧರ್ಮರಾಜು |
| ತಂದೆ ಹೆಸರು | ಶಿವಣ್ಣ |
| ವಯಸ್ಸು | 59 ವರ್ಷ |
| ಉದ್ಯೋಗ | ಟೈಲರಿಂಗ್ ಕೆಲಸ |
| ವಾಸಸ್ಥಳ | ತಂಡಗ ಗ್ರಾಮ |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಮೃತ ಸುರೇಶ್ ನನ್ನ ತಮ್ಮ. ಅವರು ಸುಮಾರು ಮೂರು ನಾಲ್ಕು ವರ್ಷಗಳ ಹಿಂದೆ ಕೊಲೆಯಾದ್ರು. ಆತ ಕೊಲೆಯಾದ ದಿನ ಬೆಳಗ್ಗೆ ಊರಿನಲ್ಲಿ ಜನ ನನ್ನ ತಮ್ಮ ಗಾಯಗೊಂಡು ರಾಮ ಮಂದಿರದ ಬಳಿ ಬಿದ್ದಿರುವ ಬಗ್ಗೆ ಮಾತನಾಡಿಕೊಳ್ಳುತ್ತಿದ್ರು. ನಾನು ವಿಷಯ ತಿಳಿದು ಹೋದೆ. ದೇವಸ್ಥಾನದ ಗೋಡೆಗೆ ಒರಗಿ ಕೂರಿಸಿದ್ರು. ರಕ್ತ ಹರಿಯುತ್ತಿತ್ತು. ಪೊಲೀಸ್ ನವರಿಗೆ ಆಗಾಗಲೇ ಫೋನ್ ಮಾಡಿದ್ರು. ಪೊಲೀಸ್ ನವರು ಬಂದ್ರು. ಬಾಡಿ ತೆಗೆದುಕೊಂಡು ತುರುವೇಕೆರೆ ಸರ್ಕಾರಿ ಆಸ್ಪತ್ರೆಗೆ ಹೋದ್ರು. ನಾನು ಹೋದೆ. ಪೊಲೀಸ್ ನವರು ಇದ್ರು. ನನ್ನನ್ನೇನು ಪೊಲೀಸ್ ನವರು ವಿಚಾರಣೆ ಮಾಡಿಲ್ಲ. ನಾನು ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸರ್ಕಾರಿ ಅಭಿಯೋಜಕರು ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 17.02.2019 ರಂದು ಬೆಳಗ್ಗೆ 8 ಗಂಟೆ ಸಮಯಕ್ಕೆ ನನ್ನ ತಮ್ಮ ಮೃತ ಪಟ್ಟ ವಿಚಾರ ನನಗೆ ತಿಳಿಯಿತು ಎಂದರೆ ಇರಬಹುದು. ಆಸ್ಪತ್ರೆಗೆ ಹೋದಾಗ ಪೊಲೀಸ್ ನವರು ಶವಪಂಚನಾಮೆಯನ್ನು ಮಾಡಿದ್ರು ಎಂದರೆ ಇರಬಹುದು. ಈಗ ನನಗೆ ಓದಿ ಹೇಳಿದಂತೆ ನಾನು ಮೇಲ್ಕಂಡ ವಿಳಾಸದಲ್ಲಿ ----- ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. (ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು).

**(ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲವೆಂದಿದ್ದಾರೆ).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**